**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆಃ 337/2021**

ಚಾಸಾಃ 1 ಪ್ರಾಸಾಃ1

| | | |
|---|---|---|
| ಹೆಸರು | : | ಶಿವರಾಮ ರಾಜೇ ಅರಸ್ |
| ಗಂಡನ/ತಂದೆಯ ಹೆಸರು | : | ಶ್ರೀಕಂಠ ರಾಜೇ ಅರಸ್ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ಎಎಸ್ಐ |
| ವಾಸ | : | ಹೊಂಗನೂರು |

**ದಿನಾಂಕ 23.07.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ**

ನಾನು ಜನವರಿ 2017 ರಿಂದ 31.05.2023 ರವರೆಗೆ ಅಕ್ಕೂರು ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 10.07.2021 ರಂದು ನನಗೆ ಚಾಸಾ2 ರವರಿಗೆ ರಾತ್ರಿ ಗಸ್ತನ್ನು ಚಾಸಾ7 ರವರು ನೇಮಕ ಮಾಡಿದ್ದು, ನಾನು ಮತ್ತು ಚಾಸಾ2 ರವರು ರಾತ್ರಿ 10.00 ಗಂಟೆಯ ಸಮಯದಲ್ಲಿ ರಾತ್ರಿ ಗಸ್ತು ಹೊರಟಿದ್ದು, ನಾನು ಮತ್ತು ಚಾಸಾ2 ರವರು ಕೋಡಂಬಳ್ಳಿ, ಹುಣಸಹಳ್ಳಿ, ಎಲೆತೋಟದಹಳ್ಳಿ, ಸೋಗಾಲ, ಕೃಷ್ಣಾಪುರಗಳ ಕಡೆ ಗಸ್ತು ಮಾಡಿಕೊಂಡು ಸುಮಾರು ಬೆಳಗಿನ ಜಾವ 4.00 ಗಂಟೆಗೆ ಇಗ್ಗಲೂರು ರಸ್ತೆ, ಗರಕಹಳ್ಳಿ ಗ್ರಾಮದಲ್ಲಿ ಗಸ್ತು ಮಾಡುತ್ತಿದ್ದಾಗ ಒಂದು ಮೋಟಾರ್ ಬೈಕ್ ಅದರಜೊತೆ 3 ಜನರು ನಿಂತುಕೊಂಡು ಮಾತನಾಡಿಕೊಂಡು ಇಗ್ಗಲೂರು ರಸ್ತೆಯಲ್ಲಿ ನಿಂತಿದ್ದರು. ಆಗ ನಾನು ಮತ್ತು ಚಾಸಾ2 ರವರು ಅವರನ್ನು ಯಾವ ಕಾರಣಕ್ಕಾಗಿ ನಿಂತಿದ್ದೀರಿ ಎಂದು ವಿಚಾರ ಮಾಡಲಾಗಿ ಆಗ ಅವರು ನಾವು ಹಾರೋಕೊಪ್ಪದವರು ಎಂದು ಹೇಳಿರುತ್ತಾರೆ ಮತ್ತು ಅವರ ಕೈಯಲ್ಲಿ ನ್ಯಾಯಾಲಯದ ಮುಂದೆ ಇರುವ ಬಂದೂಕ ಸಹ ಇತ್ತು. ಬಂದೂಕನ್ನು ಹೊಂದಲು ಯಾವುದಾದರೂ ಪರವಾನಿಗೆ ಇದೆಯೇ ಎಂದು ವಿಚಾರ ಮಾಡಲಾಗಿರುತ್ತೇವೆ ಆಗ ಅವರು ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ಆಗ ನಾನು ಮತ್ತು ಚಾಸಾ2 ರವರು ಯಾವ ಉದ್ದೇಶಕ್ಕಾಗಿ

ಸದರಿ ಬಂದೂಕನ್ನು ಹೊಂದಿದ್ದೀರಿ ಎಂದು ವಿಚಾರ ಮಾಡಿದಾಗ ನಾವು ಯಾವುದಾದರೂ ಸಣ್ಣ ಪುಟ್ಟ ಪ್ರಾಣಿಗಳು ಸಿಕ್ಕಿದ್ದಲ್ಲಿ ಭೇಟೆಯಾಡಲು ಬಂದಿರುತ್ತೇವೆಂದು ತಿಳಿಸಿರುತ್ತಾರೆ. ಆಗ ನಾನು ಮತ್ತು ಚಾಸಾ2 ರವರು ಅವರ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಶ್ರೀನಿವಾಸ್ ಬಿನ್ ಸುಭಾಷ್, 26 ವರ್ಷ, ಕಾಂತರಾಜು ಬಿನ್ ಪುಟ್ಟಯ್ಯ , 18 ವರ್ಷ, ಪ್ರದೀಪ್ ಬಿನ್ ಶ್ರೀನಿವಾಸ್, 18 ವರ್ಷ ಎಂದು ತಿಳಿದುಬಂದಿರುತ್ತದೆ. ಅವರೆಲ್ಲರೂ ಅಂಬಾಡಹಳ್ಳಿ ಗ್ರಾಮದ ವಾಸಿಗಳಾಗಿರುತ್ತೇವೆಂದು ತಿಳಿಸಿರುತ್ತಾರೆ. ಅವರ ಬಳಿ ಇದ್ದ ವಾಹನದ ಬಗ್ಗೆ ವಿಚಾರ ಮಾಡಲಾಗಿ ದ್ವಿಚಕ್ರ ವಾಹನ ಮೋಟಾರ್ ಸೈಕಲ್ ಸಂಖ್ಯೆ ಕೆಎ-41-ಇಎ-2182 ಫ್ಯಾಶನ್ ಪ್ರೋ ಎಂದು ಕಂಡು ಬಂದಿರುತ್ತದೆ. ಆಗ ನಾನು ಮತ್ತು ಚಾಸಾ2 ರವರು ಯಾವುದೇ ಪರವಾನಿಗೆ ಇಲ್ಲದೇ ಬಂದೂಕನ್ನು ಹೊಂದಿ ಭೇಟೆಯಾಡುವುದು ಕಾನೂನು ಬಾಹಿರವೆಂದು ತಿಳಿಸಿ 3 ಜನರನ್ನು ವಶಕ್ಕೆ ಪಡೆದು, ಅವರು ಹೊಂದಿದ್ದಂತಹ ಬಂದೂಕು ಮತ್ತು ದ್ವಿಚಕ್ರ ವಾಹನವನ್ನು ಸಹ ವಶಕ್ಕೆ ಪಡೆದು ಬೆಳಗ್ಗೆ 5.00 ಗಂಟೆಗೆ ಠಾಣೆಗೆ ಕರೆದುಕೊಂಡು ಹೋಗಿ ಚಾಸಾ7 ರವರ ಮುಂದೆ ಹಾಜರುಪಡಿಸಿರುತ್ತೇವೆ. ಅದೇ ದಿನ ದಿಃ11.07.2021 ರಂದು ಬೆಳಗ್ಗೆ 5.00 ಗಂಟೆಯ ಸಮಯದಲ್ಲಿ ನಾನು ನಿವೇದನೆಯನ್ನು ತಯಾರು ಮಾಡಿ ಚಾಸಾ7 ರವರಿಗೆ ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿಗೆ ಈಗ ನಿವೇದನೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಸಿಂಗಲ್ ಬ್ಯಾರೆಲ್ ಎಸ್ ಬಿ ಎಂ ಎನ್ ಬಂದೂಕನ್ನು ತೋರಿಸಲಾಗಿ ಸಾಕ್ಷಿಯು ಸದರಿ ಬಂದೂಕನ್ನು ನೋಡಿ ಗುರುತಿಸಿರುತ್ತಾರೆ. ಘಟನಾ ದಿನ ಆರೋಪಿಯ ಬಳಿ ಇದ್ದ ಬಂದೂಕು ಇದೇ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಂದೂಕನ್ನು ಮು ಮಾ 1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ಮತ್ತು 2ನೇ ಆರೋಪಿತರವರನ್ನು ನೋಡಿ ಗುರುತಿಸಿರುತ್ತಾರೆ. ಮತ್ತೊಬ್ಬ ಆರೋಪಿ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನಾಗಿರುತ್ತಾನೆ. ನಾನು ವಶಪಡಿಸಿಕೊಂಡ ದ್ವಿಚಕ್ರವಾಹನವನ್ನು ನೋಡಿದರೆ ಗುರುತಿಸುತ್ತೇನೆ .

**ಪಾಟೀ ಸವಾಲುಃ ಆರೋಪಿ ಪರ ಶ್ರೀ  ಬಿ ಎನ್ ಎಸ್     ವಕೀಲರಿಂದಃ**

ನಾನು ಮತ್ತು ಚಾಸಾ2 ನನ್ನ ಸ್ವಂತ ವಾಹನದಲ್ಲಿ ಗಸ್ತು ಹೋಗಿದ್ದೆ. ಸದರಿ ದಿನ ನಾನು ವಾಹನವನ್ನು ಚಾಲನೆ ಮಾಡುತ್ತಿದ್ದೆ. ಸ್ವಂತ ವಾಹನ ಬಗ್ಗೆ ದೂರಿನಲ್ಲಿ ತಿಳಿಸಿಲ್ಲ. ಗ್ರಾಮಗಳಲ್ಲಿ ಪ್ರತೀ ಅರ್ಧ ಗಂಟೆಗಳ ಕಾಲ ಗಸ್ತು ಮಾಡುತ್ತಿದ್ದೆವು. ಘಟನಾ ಸ್ಥಳದ ಅಕ್ಕಪಕ್ಕದ ಜಮೀನಿನ ಬಗ್ಗೆ ತಿಳಿಸಿಲ್ಲ. ನಿಖರವಾಗಿ ಇಂತಹವರ ಬಳಿ ಬಂದೂಕು ಇತ್ತು ಎಂದು ದೂರಿನಲ್ಲಿ ತಿಳಿಸಿಲ್ಲ. ಸೀಸದ ಗುಂಡುಗಳು ಯಾರ ಬಳಿ ಇತ್ತು ಎಂದು ನಿಖರವಾಗಿ ದೂರಿನಲ್ಲಿ ತಿಳಿಸಿಲ್ಲ ಮತ್ತು ನನಗೆ ಗೊತ್ತಿಲ್ಲ. ಘಟನಾ ಸಮಯದಲ್ಲಿ ಪೋಟೋ ಮತ್ತು ವೀಡೀಯೋ ಮಾಡಿಲ್ಲ. ಬಂದೂಕಿನ ಮಾಡೆಲ್ ಮತ್ತು ಸಂಖ್ಯೆಯನ್ನು ದೂರಿನಲ್ಲಿ ತಿಳಿಸಿಲ್ಲ. ಬಂದೂಕು ಲೋಡ್ ಆಗಿರುವ ಬಗ್ಗೆ ಪರಿಶೀಲನೆ ಮಾಡಿಲ್ಲ. ಆರೋಪಿತರನ್ನು ಯಾವ ವಾಹನದಲ್ಲಿ ಠಾಣೆಗೆ ಕರೆದೊಂಡು ಬಂದೆವು ಎಂದು ದೂರಿನಲ್ಲಿ ತಿಳಿಸಿಲ್ಲ. ನಾವು ಯಾವ ಯಾವ ಆರೋಪಿಯನ್ನು ಹಿಡಿದುಕೊಂಡೆವು ಎಂದು ದೂರಿನಲ್ಲಿ ತಿಳಿಸಿಲ್ಲ. ಯಾವ ಆರೋಪಿಯನ್ನು ಮೊದಲು ತನಿಖೆ ಮಾಡಿದೆವು ಎಂದು ದೂರಿನಲ್ಲಿ ತಿಳಿಸಿಲ್ಲ. ಬಂದೂಕು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಪ್ರದೀಪ್ ಗೆ ದೂರಿನಲ್ಲಿ 18 ವರ್ಷ ಎಂದು ತಿಳಿಸಿರುತ್ತೇವೆ. ಬಂದೂಕು ಚಾಲ್ತಿಯಲ್ಲಿರುವ ಬಗ್ಗೆ ಖಾತರಿಪಡಿಸಿಕೊಂಡಿಲ್ಲ. ನಾನು ಯಾವುದೇ ಗಸ್ತಿಗೆ ಹೋಗಿಲ್ಲ, ನನ್ನನ್ನು ಗಸ್ತಿಗೆ ನೇಮಕ ಮಾಡಿಲ್ಲ ಎಂದರೆ ಸುಳ್ಳು. ನಾನು ಯಾವುದೇ ಆರೋಪಿತರನ್ನು ಘಟನಾ ಸ್ಥಳದಲ್ಲಿ ಹಿಡಿದಿಲ್ಲ ಎಂದರೆ ಸುಳ್ಳು. ಆರೋಪಿತರ ಬಳಿ ಬಂದೂಕು ಮತ್ತು ಗುಂಡುಗಳು ಇರಲಿಲ್ಲ ಎಂದರೆ ಸುಳ್ಳು. ಆರೋಪಿತರ ವಿರುದ್ದ ನಮ್ಮ ಠಾಣಾ ಅಂಕಿ ಅಂಶಗಳಿಗೋಸ್ಕರ ಅನಾಥ ಮುದ್ದೆ ಮಾಲನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೇವೆ ಎಂದರೆ ಸುಳ್ಳು. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೇಂದರೆ ಸುಳ್ಳು. ಆರೋಪಿತರಿಗೆ ಬಂದೂಕು ಸೇರಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**